ತಾರೀಖು 21ನೆ ಮೇ 1907.

ನಂ. 10875–ಸ್ಯಾನಿಟರಿ 15-06-15, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳಿಂದ ಮೇಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಬೋಗಡಿ	ಮೈಸೂರು.
ತಣಿಸಿಕೊಪ್ಪಲು	ಡಿಟೋ
ತಲವಾಡಿ	ಡಿಟೋ
ಬೆಳವಾಡಿ	ಡಿಟೋ

ತಾರೀಖು 22ನೆ ಮೇ 1907.

ನಂ. 10920—ಸ್ಯಾನಿಟರಿ 66–06–50, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96, ಈ ನಂಬರುಗಳ ಇಸ್ತಿಹಾರ್ನಾಮೆಗಳಿಂದ ಮೇಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಸೋಮಪುರ	ಹಾಸನ.

ತಾರೀಖು 22ನೆ ಮೇ 1907.

ನಂ. 10922—ಸ್ಯಾನಿಟರಿ 66-06–51, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿರ್ದ ಹಾಸನ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳು ವಿಾರಿ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಗ್ರಾಮ	ಹಾಸನ
ಹೊಸಕೊಪ್ಪಲು	ಡಿಟೋ
ಕಡವಿನಕೋಟೆ	ಹೊಳೆನರಸೀಪುರ
ಬಾಣಾವರ	ಆರಸೀಕೆರೆ
ಗೊಲ್ಲರಹೊಸಕೆರೆ	ಚನ್ನರಾಯಪಟ್ಟಣ
ಹಳೇಬೀಡು	ಬೇಲೂರು

ತಾರೀಖು 22ನೆ ಮೇ 1907.

ನಂ. 10924–ಸ್ಯಾನಿಟರಿ 21–06–135, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ದ್ವಾದಸಿ ಗರುಡ ಕರ್ಯ್ಯ ಉತ್ಸವ ಅಥವಾ (ಗರುಡೋತ್ಸವ)	ತಂಜಾವೂರು	...	ತಂಜಾವೂರು	25—5—07	5—6—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮೇ 18ನೆ ಮರ್ಕುಂ 583ನೆ ಮೆಮೊ ಪ್ರಕಾರ
				ಉಭಯ ದಿನಗಳೂ ಸೇರಿ.		

ತಾರೀಖು 14ನೆ ಮೇ 1907.

ನಂ. 10685—ಮೆಡಿ. 82-06-4, ಅಸಿಸ್ಟೆಂಟ್ ಸರ್ಜನ್ ಮಿ॥ ವಿ. ಮುತ್ತುಸಾಮಿದಾಸ್ ರವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷ್ನಗಳ 177ನೆ ನಿಬಂಧನೆಯ ಮೇರೆ, 1907ನೆ ಇಸವಿಯ ಮೇ 15ನೆ ತಾರೀಖಿನಿಂದ ಆರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

2. ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಸರ್ಜನ್ ಮಿ॥ ಸಿ. ಅಪ್ಪಾದೊರೆ ಮೊದಲಿಯಾರ್‌ನ್ನು, ಮಿ॥ ವಿ. ಮುತ್ತುಸಾಮಿದಾಸ್ ರವರು ರಜಾಮೇಲೆ ಇರುವವರೆಗೆ ಅಥವಾ ಮತ್ತೊಂದು ಹುಕುಂ ಕೊಡುವವರೆಗೆ, ತುಮಕೂರು ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ (ವೈದ್ಯ ಮತ್ತು ಆರೋಗ್ಯಾಭಿವೃದ್ಧಿಯ) ಆಫಿಸರಾಗಿ ನೇಮಿಸಿದೆ.